<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1275
ಸದಸ್ಯರ ಹೆಸರು	:	ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ	:	22.09.2021
ಉತ್ತರಿಸುವ ಸಚಿವರು	:	ಕಂದಾಯ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಮಂಡ್ಯ ಜಿಲ್ಲೆ – ನಾಗಮಂಗಲ ತಾಲ್ಲೂಕು ಹೊಣಕೆರೆ ಹೋಬಳಿಯ ಇಜ್ಜಿಲಘಟ್ಟ ಗ್ರಾಮ ಗೂಡಾನ್ನಾಗಲ್ ದೇವಸ್ಥಾನಕ್ಕೆ ಸಂಬಂಧಪಟ್ಟ ಸರ್ವೆ ನಂ.105 ರಲ್ಲಿ ಒಟ್ಟು ಜಮೀನು ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)</td><td>ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ಹೊಣಕೆರೆ ಹೋಬಳಿಯ ಇಜ್ಜಿಲಘಟ್ಟ ಗ್ರಾಮ ಗೂಡಾನ್ನಾಗಲ್ ಸರ್ವೆ ನಂ.105 ರಲ್ಲಿ ಆಕಾರ್‌ಬಂದ್‌ನಂತೆ 577-21 ಎಕರೆ/ಗುಂಟೆ ಹಾಗೂ ಆರ್.ಟಿ.ಸಿ.ಯಂತೆ 535-01 ಎಕರೆ/ಗುಂಟೆ ಜಮೀನು ಇರುತ್ತದೆ.
ವಿಶೇಷ ಜಿಲ್ಲಾಧಿಕಾರಿ, ಮಂಡ್ಯ ಇವರ ಆದೇಶ ಸಂಖ್ಯೆ: ಎಲ್‌ಎನ್‌ಡಿ(2)ಸಿಆರ್: 134/1977-78 ದಿನಾಂಕ 04-03-1982 ರಂತೆ ಅರಣ್ಯ ಇಲಾಖೆಯ ಹೆಸರಿಗೆ ಆರ್.ಟಿ.ಸಿ. ದಾಖಲಾಗಿರುತ್ತದೆ.</td></tr>
<tr><td>(ಆ)</td><td>ಗೂಡಾನ್ನಾಗಲ್ ದೇವಸ್ಥಾನದ ಹತ್ತಿರ ಒಟ್ಟು ಎಷ್ಟು ಎಕರೆ ಗೋಮಾಳ ಜಮೀನು ಇದೆ; ಹಾಗೂ ಗೋಮಾಳ ಜಮೀನನ್ನು ಒತ್ತುವರಿ ಮಾಡಿಕೊಂಡಿರುವ ರೈತರು ಎಷ್ಟು; ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರೆ ಸಂಪೂರ್ಣ ಮಾಹಿತಿ ನೀಡುವುದು (ರೈತರ ಹೆಸರು ವಿಳಾಸ ಹಾಗೂ ಒತ್ತುವರಿ ಮಾಡಿಕೊಂಡಿರುವ ಜಮೀನಿನ ಸಂಪೂರ್ಣ ಮಾಹಿತಿ ನೀಡುವುದು)</td><td rowspan="2">ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ಹೊಣಕೆರೆ ಹೋಬಳಿಯ ಇಜ್ಜಿಲಘಟ್ಟ ಗ್ರಾಮ ಗೂಡಾನ್ನಾಗಲ್ ಸರ್ವೆ ನಂ.105 ರಲ್ಲಿನ ಜಮೀನು ಅರಣ್ಯ ಇಲಾಖೆಯ ಜಮೀನಾಗಿರುವುದರಿಂದ ನಮೂನೆ-53 ಮತ್ತು 57ರಲ್ಲಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಜಿಲ್ಲಾಧಿಕಾರಿ, ಮಂಡ್ಯ ಇವರ ಪತ್ರ ಸಂಖ್ಯೆ: ಎಲ್.ಎಲ್.ಡಿ(2)ಸಿಆರ್: 158/2020-21 ದಿನಾಂಕ 28-12-2020 ರಂತೆ ವಜಾ ಮಾಡಲಾಗಿರುತ್ತದೆ.</td></tr>
<tr><td>(ಇ)</td><td>ಗೂಡಾನ್ನಾಗಲ್ ಸುತ್ತಮುತ್ತ ಒತ್ತುವರಿ ಮಾಡಿಕೊಂಡಿರುವ ರೈತರ ಸಂಖ್ಯೆ ಎಷ್ಟು; ಒತ್ತುವರಿ ಮಾಡಿಕೊಂಡಿರುವ ರೈತರ ವಿರುದ್ಧ ಯಾವ ಕ್ರಮ ಕೈಗೊಂಡಿದೆ; ಒತ್ತುವರಿ ಮಾಡಿಕೊಂಡಿರುವ ರೈತರನ್ನು ಯಾವಾಗ ಖಾಲಿ ಮಾಡಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)</td></tr>
</table>

(ಕಡತ ಸಂಖ್ಯೆ:ಕಂಇ 47 ಎಲ್‌ಜಿವಿನ್ಯೆ 2021)

(ಆರ್.ಅಶೋಕ)
ಕಂದಾಯ ಸಚಿವರು